### ಏರೋಪ್ಲೇನ್ ಚಿಟ್ಟೆ

‘ಏರೋಪ್ಲೇನ್ ಚಿಟ್ಟೆಯ ಬೊಂಬಾಟ್ ಭೋಜನ’ (ಶಶಿಧರಸ್ವಾಮಿ ಆರ್. ಹಿರೇಮಠ, ಜ. 20) ಲೇಖನ ಚೆನ್ನಾಗಿತ್ತು. ವಿವರಣೆ ಮತ್ತು ಚಿತ್ರ ಎರಡೂ ಅದ್ಭುತವಾಗಿತ್ತು. ಆದರೆ ಅವರು ತಮ್ಮ ಲೇಖನದಲ್ಲಿ ಚಿಟ್ಟೆಯ ಬಾಯಿಯಲ್ಲಿರುವುದು ಕರಿ ರೆಕ್ಕೆ ಗೊದ್ದ (Black beetle) ಎಂದು ಹೇಳಿದ್ದಾರೆ. ಆದರೆ ನನಗೆ ಅದು ಗೊದ್ದ (Camponotus compressus)ನಂತೆ ಕಾಣಿಸಿತು.

—ವಿನಯ್ ಥಿಟೆ

### ಜನ ಗಣ ಕನ್ನಡ ಮನ

‘ಜನ ಗಣ ಕನ್ನಡ ಮನ’ (ಎನ್. ಜಗನ್ನಾಥ ಪ್ರಕಾಶ್, ಜ. 27) ಲೇಖನದಲ್ಲಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಹೆಜ್ಜೆಗುರುತುಗಳನ್ನು ಸ್ಪಷ್ಟವಾಗಿ ಗುರ್ತಿಸಲಾಗಿದೆ. ಸ್ತಬ್ಧಚಿತ್ರಗಳನ್ನು ನೋಡಿ ನಮ್ಮ ರಾಜ್ಯದ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಹೆಮ್ಮೆ ಉಂಟಾಗಿ ಪುಳಕಿತನಾದೆ. ಇಂತಹ ಅಪರೂಪದ ಲೇಖನಗಳನ್ನು ಪ್ರಕಟಿಸುತ್ತಿರುವ ನಮ್ಮ ‘ಸುಧಾ’ಗೆ ವಂದನೆಗಳು.

—ಎಸ್.ವಿ. ನಾಯ್ಕ ರಾಣೆ, ಧಾರವಾಡ

ತೀರಾ ತಡವಾಗಿ ಬಸವಣ್ಣನವರ ಟ್ಯಾಬ್ಲೊ ಪ್ರದರ್ಶನಕ್ಕೆ ಅವಕಾಶ ಪಡೆಯಲು ಸಾಧ್ಯವಾಗಿದೆ.

—ಜಿ. ಎಸ್. ಕುಮಾರಸ್ವಾಮಿ

### ಗಾರ್ಡನ್ ಥೆರಪಿ

‘ಗಾರ್ಡನ್ ಥೆರಪಿ’, (ಶಶಿಕುಮಾರ್ ಸಿ., ಜ. 20) ಲೇಖನ ಸಾಕಷ್ಟು ಮಾಹಿತಿಗಳನ್ನು ಒಳಗೊಂಡಿತ್ತು. ‘ಸುಧಾ’ ಪತ್ರಿಕೆಯು ಕೃಷಿ, ಆರೋಗ್ಯ, ಪರಿಸರ ಹೀಗೆ ವೈವಿಧ್ಯದ ವಸ್ತುಗಳ ಕುರಿತು ಲೇಖನಗಳನ್ನು ಪ್ರಕಟಿಸುತ್ತಿರುವುದು ಅಭಿನಂದನೀಯ. ಅಲಂಕಾರಿಕ ಗಿಡಗಳಲ್ಲದೆ ತರಕಾರಿಗಳು ಮತ್ತು ಔಷಧೀಯ ಸಸ್ಯಗಳನ್ನೂ ಜನರು ಗಾರ್ಡನ್‌ನಲ್ಲಿ ಬೆಳೆಸಿ ಬಳಸುತ್ತಿದ್ದಾರೆ. ಪತ್ರಿಕೆಯ ಇತರ ಲೇಖನಗಳೂ ಉತ್ತಮವಾಗಿವೆ.

—ವಿಜಯ್ ಅಂಗಡಿ, ಮಡಿಕೇರಿ





### ಆರದಿರಲಿ ಬೆಳಕು

‘ಆರದಿರಲಿ ಬೆಳಕು’ (ಸುಧೀರ್ ಪೊಸಿತ್ಲು, ಜ. 27) ಕಥೆ ನೈಜತೆಗೆ ತುಂಬಾ ಹತ್ತಿರವಿದೆ. ಮುಂದೇನು ಅನ್ನುವ ಕುತೂಹಲ ಕೊನೆವರೆಗೂ ಇರುತ್ತದೆ. ಕೊನೆಯಲ್ಲಿ ಅಮೃತ ಉಳಿಯಲಿ ಅನ್ನುವ ಭಾವನೆ ಕಾಡುತ್ತದೆ. ಶೀರ್ಷಿಕೆಯೂ ಹೊಂದುವಂತಿದೆ.

—ನೇಹಾ, ಅಥಣಿ

ಕಥೆ ಚಿಂತನೆಗೆ ಹಚ್ಚಿತು. ಶಂಕರನ ಹುಂಬತನದ ಸ್ವಭಾವ ಚೆನ್ನಾಗಿ ಚಿತ್ರಿತವಾಗಿದೆ. ಸಮಾಜದಲ್ಲಿ ನಡೆಯುವ ವಿಷಯಗಳನ್ನು ಸೂಕ್ಷ್ಮವಾಗಿ ಗಮನಿಸಿ ಬರೆದಿದ್ದಾರೆ. ಗಂಭೀರ ಸನ್ನಿವೇಶದ ನಡುವೆಯೂ ಬರುವ ಹಾಸ್ಯದ ವಾಕ್ಯಗಳು ಮುದ ನೀಡುತ್ತವೆ. ಅಮೃತಾಳಂತಹ ಹೆಣ್ಣುಮಕ್ಕಳ ಪರಿಸ್ಥಿತಿ ಮನಸ್ಸಿಗೆ ತಟ್ಟುತ್ತದೆ. ಮನಸ್ಸಿಗೆ ಪ್ರಭಾವ ಬೀರಿದ ಕತೆ.

—ಪಿ. ಆರ್. ನಾರಾಯಣ, ಭದ್ರಾವತಿ

ಇದೊಂದು ಮನಕಲಕುವ ಕಥೆ. ಇದನ್ನು ಓದಿದವರಲ್ಲಿ ಕಣ್ಣಂಚು ತುಂಬಿ ಬಾರದಿರದು. ಈ ಕಥೆಯನ್ನು ತುಂಬಾ ಸರಳ ಪದಗಳನ್ನು ಬಳಸಿ ಉಣಬಡಿಸಿದ ಸುಧೀರ್ ಅವರಿಗೆ ಧನ್ಯವಾದಗಳು. ಅಮೃತಾಳಿಗೆ ಮುಂದೆ ಏನಾಗಿರಬಹುದೆಂದು ತಿಳಿಯುವ ಕುತೂಹಲವಿದೆ. ಸಾಧ್ಯವಾದರೆ ಕಥೆಗಾರರಿಂದ ಮುಂದಿನ ವಿಷಯವನ್ನು ಕಥಾಹಂದರದ ಮೂಲಕವೇ ತಿಳಿಸಲು ಕೋರುತ್ತೇನೆ.

—ವಿದ್ಯಾಧರ ರಾ. ಹಿರೇಮಠ

### ಅಲರ್ಜಿ: ಇರಲಿ ಮುತುವರ್ಜಿ

‘ಅಲರ್ಜಿ: ಇರಲಿ ಮುತುವರ್ಜಿ’ (ಡಾ. ಎಚ್. ಎಸ್. ಮೋಹನ್, ಜ. 27) ಲೇಖನ ಬಹಳ ಉಪಯುಕ್ತ ಅನ್ನಿಸಿತು.

—ನಿತ್ಯ ಪಿ.ಎಸ್., ಬೆಂಗಳೂರು

### ಮೆಟಾವರ್ಸ್

‘ಮೆಟಾವರ್ಸ್ ಮಾಯಾಜಾಲ’ (ಕರ್ಕಿ ಕೃಷ್ಣಮೂರ್ತಿ, ಜ. 20) ಓದಿದೆ. ಫೇಸ್‌ಬುಕ್ ಖಾತೆ ಸಹ ಹೊಂದಿಲ್ಲದ ನನ್ನಂಥವರಿಗೆ ಮೆಟಾವರ್ಸ್ ತಂತ್ರಜ್ಞಾನದ ಬಗ್ಗೆ ಅರ್ಥವಾಗುವ ಹಾಗೆ ವಿವರಿಸಿದ್ದೀರಿ. ತುಂಬಾ ಉಪಯುಕ್ತವಾದ ಲೇಖನ. ಮುಂದೆ ಈ ರೀತಿ ಎಲ್ಲವೂ ಜರುಗುತ್ತದೆ ಅಂತಾದರೆ ಮುಂದಿನ ಪೀಳಿಗೆ ಬಗ್ಗೆ ಆತಂಕವಾಗುತ್ತದೆ. ದೈಹಿಕ ಚಟುವಟಿಕೆಗಳು ಈಗಲೇ ಕಡಿಮೆಯಾಗಿರುವಾಗ ಮುಂದೆ ಇನ್ನಾವ ರೀತಿ ಇರುತ್ತದೋ.

—ಕೆ. ಎನ್. ಅಂಜನಾ, ಚಾಮರಾಜನಗರ

ಸಾಕಷ್ಟು ಮಾಹಿತಿಗಳನ್ನು ಒಳಗೊಂಡಿರುವ ಅತ್ಯುತ್ತಮ ಲೇಖನ. ನಮ್ಮ ಇಂದಿನ ತಲೆಮಾರು ಮುಂಬರುವ ತಂತ್ರಜ್ಞಾನದ ಕುರಿತು ಅರಿಯುವಂತೆ ಮಾಡುವ ಇಂಥ ಲೇಖನಗಳು ಅಗತ್ಯ.

—ಉಲ್ಲಾಸ್

### ಅಮ್ಮನಿಗೇನೂ ಗೊತ್ತಿಲ್ಲ ಅಂತೀರಾ?

‘ಅಮ್ಮನಿಗೇನೂ ಗೊತ್ತಿಲ್ಲ ಅಂತೀರಾ’ (ಸ್ವಯಂಪ್ರಭಾ, ಜ. 27) ಬರಹ ಚೆನ್ನಾಗಿತ್ತು. ಪುರುಷಪ್ರಧಾನವಾದ ಈ ಸಮಾಜದಲ್ಲಿ ಹೆಣ್ಣುಮಕ್ಕಳು ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ಆಕೆಯನ್ನು ಹೀಯಾಳಿಸುವುದು ಹಳೆಯ ಕಾಲದಿಂದಲೂ ಗಂಡಸರಿಗೆ ಬಂದಿರುವ ಒಂದು ಕೆಟ್ಟ ಚಾಳಿ.

—ಎನ್. ವೈದೇಹಿ, ಮೈಸೂರು

### ಉತ್ತಮ ಚಿತ್ರಗಳು

‘ನೀವು ಕೇಳಿದಿರಿ’ ಅಂಕಣದಲ್ಲಿ ಶಶಿಧರ್ ಅವರ ಕುಂಚದಿಂದ ಮೂಡಿಬರುತ್ತಿರುವ ಚಿತ್ರಗಳು ಬಲು ಸೊಗಸು. ಭಾವು ಪತ್ತಾರರಿಂದ ರಚಿಸಲ್ಪಟ್ಟ ಚಿತ್ರಗಳೂ ಅಷ್ಟೆ. ಕಲಾವಿದರಿಗೆ ಅಭಿನಂದನೆಗಳು.

—ಭಾರತಿ ಪ್ರಭು

### ಅಂತಃಕರಣ ಮೀಟುವ ಕಥೆ

‘ಗುರುತು’ (ಪಿ.ಬಿ. ಪ್ರಸನ್ನ, ಜ. 20) ಕಥೆ ಚೆನ್ನಾಗಿತ್ತು. ಹಿಂದೂ, ಮುಸ್ಲಿಂ ಧರ್ಮಗಳನ್ನು ಮೀರಿದ ಮಾನವೀಯ ಚಿತ್ರಣವನ್ನು ಕಥೆಯಲ್ಲಿ ಕಾಣಬಹುದು. ಕರಾವಳಿಯ ಜನ, ಭಾಷೆಯ ಮಾತುಗಳಲ್ಲಿ ಲಾಕ್‌ಡೌನ್ ಪರಿಣಾಮದ ಹಿಂದಿನ ಕರಾಳ ಸತ್ಯವನ್ನು ತೆರೆದಿಟ್ಟಿದ್ದಾರೆ. ಕಥೆಯ ಕೊನೆಯ ವಾಕ್ಯದಿಂದ ಓದುಗರ ಹೃದಯ ಆರ್ದ್ರವಾಗಿ ಅರಿವಿಲ್ಲದೆ ಕಣ್ಣಿನಿಂದ ನೀರು ಒಸರುತ್ತದೆ.

—ಅಕ್ಕಿಹೆಬ್ಬಾಳು ನಾಗರಾಜ್, ಮೈಸೂರು

ಕಥೆ ಹೃದಯಸ್ಪರ್ಶಿಯಾಗಿದೆ. ಅಂತರ್‌ಧರ್ಮಗಳ ನಡುವೆ ಇರಬೇಕಾದ ಸಹಾನುಭೂತಿಯ ಕುರಿತು ಅರಿವು ಮೂಡಿಸುತ್ತದೆ. ಕಥೆಯ ಆಧಾರಸ್ತಂಭಗಳಾದ ರಾಜೀವಿ ಮತ್ತು ಐಶಾಬಿಯ ಕಾಳಜಿಯನ್ನು ಎತ್ತಿ ತೋರಿಸುತ್ತದೆ.

—ಜಿ.ಸುಬ್ರಹ್ಮಣ್ಯ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in